

ಒಂದು ಕಡೆ ನಿಂತಿದ್ದರೆ ಇದು ಸಾಧ್ಯವಾಗುತ್ತಿತ್ತೇ? ಮಳೆಯಲ್ಲೇ ನಡಿಗೆ ಹಾಕಿದಾಗ ಮಾತ್ರ ಇದು ಸಾಧ್ಯವಾಯಿತು. ಇನ್ನೂ ಮುಂದೆ ನಾವು ನಿಲ್ಲುವುದು ಬೇಡ. ನಮ್ಮ ನಡಿಗೆಯಲ್ಲೇ ಮಳೆಯಿದೆ. ನಮ್ಮ ಮಳೆಯಲ್ಲೇ ನಡಿಗೆಯಿದೆ.

* * *

## ಎರಡು ಗೆರೆ

ಎರಡು ಗೆರೆ ಎಳೆದ ನಂತರ ಹಾಳೆ ಎಸೆದು, ಪೆನ್ಸಿಲ್ ಒಲೆಗೆ ಹಾಕಿ ನಾನು ಎದ್ದು ಹೋಗುತ್ತಿದ್ದೇನೆ. ಹಾಳೆ ಯಾರಿಗಾದರೂ ಸಿಕ್ಕಿದರೆ ಆ ಗೆರೆಗಳು ಏನು ಹೇಳಬಹುದು?

ಅಕಸ್ಮಾತ್ ಪ್ರತಿಭಾಶಾಲಿ ಚಿತ್ರಕಾರನಿಗೆ ಆ ಹಾಳೆ ಸಿಕ್ಕಿದರೆ ಅವನ ಅಪೂರ್ಣ ಚಿತ್ರಗಳಲ್ಲಿ ಕಾಣೆಯಾಗಿದ್ದ ಗೆರೆಗಳು ಅವನಿಗೆ ಸಿಗಬಹುದೇ? ಅಕಸ್ಮಾತ್ ಅವನು ಬೇರೆ ದೇಶದ ಕಲಾವಿದನಾಗಿದ್ದರೆ ಎರಡೂ ದೇಶದ ಗೆರೆಗಳು ಕೂಡಬಹುದೇ?

* * *

## ಹಾರಿ ಹೋಗಲಿ

ಹೂಗಳನ್ನು ಚೀಲದಲಿ ತುರುಕಿ ಕಾಲುಗಳ ಸಂದಿಯಲ್ಲಿಟ್ಟು ಯಾವ ಲೆಕ್ಕಾಚಾರ ಮಾಡುತಿರುವೆ? ತಲೆಯೊಳಗೆ ಸಂತೆಯಿಟ್ಟುಕೊಂಡು ಮತ್ತೆ ಯಾವ ಸಂತೆಗೆ ಹೊರಟಿರುವೆ? ಎಷ್ಟೊಂದು ಕಣ್ಣುಗಳು ನಿನ್ನನ್ನು ನೋಡುತಿವೆ. ನೀನು ಅವುಗಳನ್ನು ನೋಡುತ್ತಲೇ ಇಲ್ಲ. ನಿನ್ನ ಹೂಗಳ ಚೀಲಗಳನ್ನು ದಾಟಿಕೊಂಡು ಕೆಲವು ಕಾಲುಗಳು ಹೋದವು. ನಿನ್ನ ಹೂಗಳು ಕಾಲುಗಳನು ದಾಟಲೇ ಇಲ್ಲ. ದಾಟಬೇಕಾದ ಹೂಗಳನ್ನು ನೀನು ದಾಟದಂತೆ ಮಾಡಿರುವೆ. ಈಗ ಬೀಸುತ್ತಿರುವ ಗಾಳಿಗೆ ಅವು ಹೇಗೆ ದಾಟಬೇಕಿತ್ತು ಗೊತ್ತೇ? ಲೆಕ್ಕಾಚಾರದ ಚೀಟಿ ಬಿಸಾಕು. ಚೀಲ ಬಿಚ್ಚು. ಹೂಗಳನ್ನು ಸುರಿದು ಬಿಡು. ಭರ್ರನೆ ಬರುತಿರುವ ಗಾಳಿಗೆ ಅವು ಬಿಡಿಸಿದ ಜಾಗಕ್ಕಾದರೂ ಹಾರಿ ಹೋಗಲಿ ಅಥವಾ ಕಟ್ಟಿದ ಜಾಗಕ್ಕಾದರೂ ಹಾರಿ ಹೋಗಲಿ.

* * *

## ಅಸಲಿ ನಕಲಿ

ಇದ್ದ ಸ್ವಲ್ಪ ಅನ್ನದಲ್ಲೇ ಆವಾಗಿಂದ ಕೂಗುತ್ತಿದ್ದ ಬೆಕ್ಕಿಗೊಂದಿಷ್ಟು ಹಾಕಿ ಬರೋಣ ಎಂದು ಹೋದೆ. ಫೋನು ಸದ್ದಾಯಿತು. ನಾನೂ ಬಂದೆ ಕಟ್ಟಾಯಿತು. ಅದು ಏನು ಹೇಳುತ್ತಿತ್ತೋ ಏನೋ... ಅದೆಲ್ಲೋ ದೂರದಲ್ಲಿ ಬೋರು ಕೊರೆಯುತ್ತಿದ್ದರು. ಮತ್ತೊಂದೆಡೆ ತಪಟೆ ಸದ್ದು ಅಪ್ಪಳಿಸುತ್ತಿತ್ತು. ಕಂದಾಯ ಕಟ್ಟಲು ಕೊನೆ ದಿನಾಂಕದ್ದಿರಬಹುದು. ಉಚಿತ ಕಣ್ಣಿನ ಆಪರೇಷನ್‌ದಿರಬಹುದು. ದೇವರ ಮೆರವಣಿಗೆಯದಂತೂ ಅಲ್ಲ. ಏಕೆಂದರೆ ಹಳಬರೆಲ್ಲ ಸತ್ತ ಮೇಲೆ ಹೊಸಬರಿಗೆ ಅದೆಲ್ಲ ಗೊತ್ತೇ ಇಲ್ಲ. ಗೊತ್ತಿದೆ, ಆದರೆ ಜೀವಂತ ಮೆರವಣಿಗೆ ಗೊತ್ತಿಲ್ಲ. ಮೊಬೈಲ್‌ನಲ್ಲಿ ನೋಡುತ್ತಾರೆ ಅಷ್ಟೆ. ಜೀವಂತ ಮೆರವಣಿಗೆ ಮಾಡಬೇಕೆಂದರೆ ಅದೇನು ಹುಡುಗಾಟವೇ..! ದಾರಿ ತುಂಬ ಜನರೇಟರ್ ಸಾಗಿಸಬೇಕು. ಒಂದೇ ಸಮ ಎಲ್ಲೆಲ್ಲಿಗೋ ಓಡಾಡುವ ವಾಹನಗಳನ್ನು ತಡೆಯಬೇಕು. ಮುಖವಾಡ ಹಾಕಿಕೊಂಡು ಅವರೆಲ್ಲ ಕುಣಿಯುತ್ತಿದ್ದರೆ ನೋಡುವುದೇ ಚೆನ್ನ. ಅದು ಏಕೆ ಚೆನ್ನಾಗಿರುತ್ತೆ ಎಂದರೆ ಮುಖವಾಡ ಹಾಕಿ ಕುಣಿಯುವವರು ಯಾರೂ ಮುಖವಾಡದಂತೆ ನಡೆದುಕೊಳ್ಳುತ್ತಿರಲಿಲ್ಲ. ಈ ಕಾಲದ ಜನ ಮುಖವಾಡಗಳು ಅಸಲಿ ಇರುವ ಕಾರಣ